ಮಾವುತನ ಬೇಜವಾಬ್ದಾರಿಯಿಂದ ಆನೆ ಮೇಲೆ ಕುಳಿತ್ತಿದ್ದ ಒಬ್ಬ ಖಾಸಗಿ ಡಾಕ್ಟರು ಕೆಳಕ್ಕೆ ಬಿದ್ದು ಶಾಶ್ವತವಾಗಿ ಎರಡು ಕಣ್ಣು ಕಳೆದುಕೊಂಡಿದ್ದಾರೆ. ಅವರು ಲಕ್ಷಾಂತರ ರೂ. ಖರ್ಚು ಮಾಡಿದರೂ ಕೂಡ ಕಣ್ಣು ಹೋಗಿವೆ. ಸರ್ಕಾರ ಏನಾದರೂ ಪರಿಹಾರ ಕೊಡಬೇಕೆಂದು ಒತ್ತಾಯ ಮಾಡಿದರೂ ಸರ್ಕಾರ ಮೌನವಾಗಿದೆ, ದಯಮಾಡಿ ತಾವು ನಾಳೆ ಇದರ ಬಗ್ಗೆ ಉತ್ತರ ಕೊಡಬೇಕು. ಜಿಲ್ಲಾಧಿಕಾರಿಗಳ ರಿಪೋರ್ಟ್ ಇದೆ, ಮುಖ್ಯ ಕಾರ್ಯದರ್ಶಿಗಳು ತಮಗೆ ಕೊಟ್ಟಿದ್ದಾರೆ. ಶಾಶ್ವತವಾಗಿ ಎರಡು ಕಣ್ಣೂ ಹೋಗಿವೆ. 40ವರ್ಷ ವಯಸ್ಸು, ಸಣ್ಣ ಮಕ್ಕಳು, ಮಾನಸಿಕವಾಗಿ ಅವರು ಬಹಳ ವ್ಯಥೆ ಪಡುತ್ತಿದ್ದಾರೆ. ಅದನ್ನು ತರಿಸಿನೋಡಿ. ಮಾವುತನ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಬೇಜವಾಬ್ದಾರಿತನದಿಂದ ಈ ರೀತಿ ಆಗಿದೆ. ಅವನು ಶಾಶ್ವತವಾಗಿ ಕಣ್ಣು ಕಳೆದುಕೊಂಡಿದ್ದಾನೆ. ಮಾವುತ ಸರಿಯಾಗಿ ನೋಡಿಕೊಂಡಿದ್ದರೆ ಜಾಲಿ ರೈಡ್ ಮಾಡುತ್ತಿದ್ದವರು ಕೆಳಗಡೆ ಬೀಳುತ್ತಿರಲಿಲ್ಲ. ದಯಮಾಡಿ ಇದರ ಬಗ್ಗೆ ಗಮನಹರಿಸಿ ಸರಿಯಾದ ಪರಿಹಾರ ಒದಗಿಸಿಕೊಡಬೇಕು ಮತ್ತು ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆ ಕೊಡಬೇಕೆಂದು ತಮ್ಮನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಅದನ್ನು ಪರಿಶೀಲನೆ ಮಾಡೋಣ.

ಉಪಾಧ್ಯಕ್ಷರು:– ಈಗ ಚುನಾವಣಾ ಪ್ರಸ್ತಾವಗಳು. ಮಾನ್ಯ ಮುಖ್ಯಮಂತ್ರಿಗಳು.

<u>ಚುನಾವಣಾ ಪ್ರಸ್ತಾವಗಳು</u>

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ):– ಮಾನ್ಯ ಉಪಾಧ್ಯಕ್ಷಿಣಿಯವರೇ, "1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 21 (1) (14) ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ ಹಾಗೂ ಕುವೆಂಪು ವಿಶ್ವವಿದ್ಯಾನಿಲಯಗಳ ಸೆನೆಟ್‌ಗಳಿಗೆ ತಲಾ ಐದು ಜನ ಸದಸ್ಯರನ್ನು ಚುನಾಯಿಸಬೇಕು ಎಂದು ಸೂಚಿಸುತ್ತೇನೆ."

ಉಪಾಧ್ಯಕ್ಷರು:– ಪ್ರಸ್ತಾವನೆಯನ್ನು ಸಭೆಯ ಮುಂದೆ ಇಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಉಪಾಧ್ಯಕ್ಷಿಣಿಯವರೇ, ನಿನ್ನೆ ದಿವಸ....

<u>ದೂರದರ್ಶನದವರಿಂದ ಸದನದ ಕಾರ್ಯಕಲಾಪಗಳನ್ನು ಬಿತ್ತರಿಸುವಲ್ಲಿ ತಾರತಮ್ಯ</u>

ಶ್ರೀ ಸಿ. ಬೈರೇಗೌಡ:– ತಾವು ನನಗೆ ಆಮೇಲೆ ಎಂದು ಮೊದಲೇ ಹೇಳಿದ್ದೀರಿ. ನಿನ್ನೆ ದಿವಸ ತಮ್ಮ ಗಮನಕ್ಕೆ ತಂದಿರತಕ್ಕಂಥ ವಿಚಾರ ಏನೆಂದರೆ ಈ ಸದನದಲ್ಲಿ ಈ ಸುದ್ದಿ ಮಾಧ್ಯಮಗಳು ಈ ಸದನ ಮತ್ತು ತಮ್ಮ ಅಪ್ಪಣೆಯ ಮೇರೆಗೆ ಬಂದು ಇಲ್ಲಿ ಕುಳಿತು ಇಲ್ಲಿ ನಡೆಯತಕ್ಕಂಥ ನಡವಳಿಕೆಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸತಕ್ಕಂಥದ್ದು ಒಂದು ವ್ಯವಸ್ಥೆ ಇದೆ. ನಾವೆಲ್ಲರೂ ಈ ಸದನದಲ್ಲಿ ಆ ಕಡೆ ಕುಳಿತಿರತಕ್ಕಂಥವರಾಗಲಿ, ಈ ಕಡೆ ಕುಳಿತಿರತಕ್ಕಂಥವರಾಗಲಿ, ಯಾರೇ ಆಗಲಿ ಈ ಮಾಧ್ಯಮದ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೇವೆ. ಅದು ನಮ್ಮ ಸಮಾಜದ, ದೇಶದ ಒಂದು ಅಂಗ ಎನ್ನತಕ್ಕಂಥದ್ದು ನಮ್ಮ ವ್ಯವಸ್ಥೆಯ ಒಂದು ಅಂಗ ಎನ್ನತಕ್ಕಂಥದ್ದನ್ನು ನಾವಂತೂ ಕೂಡ ಮನಗಂಡಿದ್ದೇವೆ. ಆದರೆ . ದುರಾದೃಷ್ಟ ಏನೆಂದರೆ ಈ ಸದನದಲ್ಲಿ ನಡೆಯತಕ್ಕಂಥ ಕಾರ್ಯಕಲಾಪಗಳನ್ನು ವರದಿ ಮಾಡತಕ್ಕಂಥ ಸಂದರ್ಭದಲ್ಲಿ ಅದು ಪ್ರಮುಖವಾಗಿ ಈ ದೂರದರ್ಶನದಲ್ಲಿ ವರದಿ ಮಾಡತಕ್ಕಂಥ ಸಂದರ್ಭದಲ್ಲಿ ತಾರತಮ್ಯವನ್ನು ಎಸಗುತ್ತಿದ್ದಾರೆ. ಈ ವಿಚಾರ ಇಲ್ಲಿ ಪ್ರಥಮವಾಗಿ ಪ್ರಸ್ತಾಪವಾಗುತ್ತಿಲ್ಲ. ಈ ಹಿಂದೆಯೂ ಸಹ ಈ ರೀತಿಯಾದಂಥ ವಿಚಾರಗಳು ಪ್ರಸ್ತಾಪವಾಗಿದೆ. ಹಿಂದೆ ಒಂದು ಸಾರಿ ಮಾನ್ಯ ವಾಟಾಳ್ ನಾಗರಾಜ್‌ರವರ ವಿಚಾರದಲ್ಲಿ

ಇದೇ ದೂರದರ್ಶನದ ಬಗ್ಗೆ ಅಧ್ಯಕ್ಷರಿಗೆ ಹಕ್ಕುಚ್ಯುತಿಯನ್ನು ಕಳುಹಿಸಿರತಕ್ಕಂಥದ್ದು ಇದೆ. ಆದರೆ ನಾವು ಅದನ್ನು ಮುಂದುವರಿಸುವುದಕ್ಕೆ ಹೋಗಿಲ್ಲ. ಕಾರಣವೇನೆಂದರೆ ಅವರು ಸರಿಪಡಿಸಿಕೊಳ್ಳುತ್ತಾರೆ. ಇವತ್ತೇನೋ ಅಚಾತುರ್ಯವಾಗಿರಬಹುದು, ನಾಳೆಯಾದರೂ ಕೂಡ ಸರಿಪಡಿಸಿಕೊಳ್ಳುತ್ತಾರೆ ಎನ್ನತಕ್ಕಂಥ ಒಂದು ಆಸೆ ನಮಗಿತ್ತು. ಆದರೆ ಇವತ್ತು ಸರಿಪಡಿಸಿಕೊಳ್ಳತಕ್ಕಂಥ ಪರಿಸ್ಥಿತಿಯೇ ಇವತ್ತಿನ ದಿವಸ ಇಲ್ಲ. ಅದಕ್ಕಿಂತ ಮೊದಲು ಅವರು ತದ್ವಿರುದ್ಧವಾದ ದಿಕ್ಕಿನಲ್ಲಿ ಹೋಗುತ್ತಿದ್ದಾರೆ. ಮೊನ್ನೆ ದಿವಸ ಸಭೆ ಪ್ರಾರಂಭವಾಗಿದೆ, ಪ್ರಾರಂಭವಾಗಿರತಕ್ಕಂಥ ಸಂದರ್ಭದಲ್ಲಿ ನಾವೆಲ್ಲರೂ ಸದನದಲ್ಲಿ ಬರುತ್ತಿರತಕ್ಕಂಥದ್ದು ಅದನ್ನು ದೂರದರ್ಶನದಲ್ಲಿ ತೋರಿಸತಕ್ಕಂಥದ್ದು ಮೊದಲಿನಿಂದ ಬಂದಿರತಕ್ಕಂಥ ಪದ್ಧತಿ. ಆದರೆ ಕೆಲವರನ್ನು ಮಾತ್ರ ತೋರಿಸುತ್ತಾರೆ. ಉದಾಹರಣೆಗೆ ವಿರೋಧ ಪಕ್ಷದ ನಾಯಕರೇ ಇಲ್ಲ, ಮೊದಲನೇ ದಿವಸ ಅವರನ್ನು ತೋರಿಸಿಲ್ಲ. ನನ್ನನ್ನೇ ತೋರಿಸಿಲ್ಲ. ನಾನೂ ಕೂಡ ಒಂದು ಪಕ್ಷದ ವತಿಯಿಂದ ಫ್ಲೋರ್ ಲೀಡರ್ ಆಗಿ ಬಂದು ಇಲ್ಲಿ ಕುಳಿತಿದ್ದೇನೆ. ಅದೇ ರೀತಿ ಇನ್ನೂ ಪ್ರಮುಖವಾದ ಸದಸ್ಯರುಗಳು ಯಾರು ಇದ್ದಾರೆ, ಅವರನ್ನು ಕೂಡ ಇವತ್ತಿನ ದಿವಸ ತೋರಿಸಿಲ್ಲ. ಈ ರೀತಿಯಾದಂಥ ದೂರದರ್ಶನ ಇರತಕ್ಕಂಥದ್ದು ಕೇವಲ ಆಡಳಿತ ಪಕ್ಷದವರನ್ನೇ ಪ್ರಚಾರ ಮಾಡುವುದಕ್ಕಲ್ಲ. ಒಂದು ಅಂಗವಾಗಿ ಇಲ್ಲಿ ಕೆಲಸವನ್ನು ಮಾಡುವುದಕ್ಕೆ ದೂರದರ್ಶನ ಇವತ್ತಿನ ದಿವಸ ಇಲ್ಲ. ಈ ರೀತಿಯಾದ ತಾರತಮ್ಯ ನಡೆಯುತ್ತಿರತಕ್ಕಂಥದ್ದು ಇದು ಮೊದಲನೆಯ ಸಾರಿ ಅಲ್ಲ. ಇದು ಅನೇಕ ಸಾರಿ ನಡೆದಿದೆ. ನಾವು ಸದನದ ಗಮನಕ್ಕೆ, ಅಧ್ಯಕ್ಷರ ಗಮನಕ್ಕೂ ಕೂಡ ತಂದಿದ್ದೇವೆ. ಆದರೂ ಸಹ ಇದನ್ನು ತಿದ್ದುಪಡಿ ಮಾಡತಕ್ಕಂಥ, ಸರಿಯಾದ ಮಾರ್ಗದಲ್ಲಿ. ತಾರತಮ್ಯವಾಗದೇ ಇರತಕ್ಕಂಥದ್ದು ಎಲ್ಲಾ ಪಕ್ಷಗಳಿಗೂ ಎಲ್ಲರಿಗೂ ಸರಿಸಮಾನವಾದಂಥ ಒಂದು ಆದ್ಯತೆಯನ್ನು ಕೊಡತಕ್ಕಂಥದ್ದನ್ನು ಮರೆತು ಇವತ್ತಿನ ದಿವಸ ಕೇವಲ ಒಂದು ಪಕ್ಷದ ಒಂದು ಕಡೆಯ ವಾಣಿಯಾಗಿ, ಮುಖವಾಣಿಯಾಗಿ ದೂರದರ್ಶನ ಕೆಲಸವನ್ನು ಮಾಡುತ್ತಿದೆ. ನಾವು ಮೊದಲೇ ತಮ್ಮಲ್ಲಿ, ಅಧ್ಯಕ್ಷರಲ್ಲಿ ವಿನಂತಿ ಮಾಡಿದ್ದೇವೆ. ಅವರನ್ನು ತಮ್ಮ ಕಛೇರಿಗೆ ಕರೆಯಿಸಿ ಅವರಿಗೆ ಬುದ್ಧಿವಾದವನ್ನು ಹೇಳಬೇಕು ಎನ್ನತಕ್ಕಂಥ ಮನವಿ ತಮ್ಮಲ್ಲಿ ಇತ್ತು. ನಾನು ಈಗಲೂ ಕೂಡ ಹೇಳುತ್ತೇನೆ. ಹಕ್ಕುಚ್ಯುತಿಯನ್ನು ಮತ್ತೊಂದು ಸಾರಿ ಕಳುಹಿಸುವುದಕ್ಕಿಂತ ಮೊದಲು ತಾವು ಅವರನ್ನು ಕರೆದು ಬುದ್ಧಿವಾದವನ್ನು ಹೇಳಬೇಕು ಎಂದು ತಮ್ಮಲ್ಲಿ ವಿನಂತಿಸುತ್ತೇನೆ. ಅವರು ಬುದ್ಧಿವಾದಕ್ಕೂ ಮಣಿಯದಿದ್ದರೆ ಅವರಿಗೆ ಇಲ್ಲಿ ಜಾಗವನ್ನು ಕೊಡಕೂಡದು ಎಂದು ನನ್ನ ಆಗ್ರಹ. ದಯವಿಟ್ಟು ತಾವು ಇದನ್ನು ಪರಿಶೀಲಿಸಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು:– ಅವರನ್ನು ಕರೆಯಿಸಿ ನಾನು ಮಾತನಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿನ್ನೆ ಎಕ್ಸೈಜ್ ಬಗ್ಗೆ ಒಂದು ಪ್ರಶ್ನೆ ಇತ್ತು. ಇದನ್ನು ಬೇರೆ ರೂಪದಲ್ಲಿ ಇವತ್ತು ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೀರಿ.

ಉಪಾಧ್ಯಕ್ಷರು:– ಇವತ್ತಲ್ಲ ಮುಂದೆ ಎಂದು ಹೇಳಿದೆ. ಇವತ್ತು ಹಾಕಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಳೆಯಾದರೂ ಹಾಕುತ್ತೀರಾ ?

ಉಪಾಧ್ಯಕ್ಷರು:– ಅದನ್ನು ಹೆಲ್ಡ್ ಓವರ್ ಕ್ವಶ್ಚನ್ಸ್ ಎಂದು ಮಾಡಿದ್ದೇವೆ. ಅದನ್ನು ಮುಂದೆ ತೆಗೆದುಕೊಳ್ಳೋಣ. ಎಲ್ಲವನ್ನೂ ಹೆಲ್ಡ್ ಓವರ್ ಎಂದು ಮಾಡಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಬೆಳಿಗ್ಗೆ ನಾನು ತಮ್ಮ ಛೇಂಬರ್‌ನಲ್ಲಿ ಬಂದಾಗ ಅದನ್ನು ಬೇರೆ ತರಹ ಕನ್‌ವರ್ಟ್ ಮಾಡುತ್ತಿದ್ದೇನೆ ಎಂದು ಹೇಳಿದ್ದೀರಿ, ಈಗ ಕೊಡುತ್ತಿದ್ದೇನೆ ಎಂದು ಹೇಳಿದ್ದಿರಿ.

ಉಪಾಧ್ಯಕ್ಷರು:– ಈಗ ಅದನ್ನು ಹೆಲ್ಡ್ ಓವರ್ ಕ್ವಶ್ಚನ್ಸ್ ಎಂದು ಮಾಡಿದೆ. ನಿನ್ನೆ ಏನೇನು

ಮೂರು – ನಾಲ್ಕು ಕ್ವಶ್ಚನ್ಸ್‌ಗಳು ಇದ್ದವು, ಅವೆಲ್ಲವನ್ನೂ ಹೆಲ್ಡ್ ಓವರ್ ಎಂದು ಮಾಡಿದೆ. ಆದಷ್ಟು ಜಾಗ್ರತೆ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಳೆಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು:– ಆ ರೀತಿ ನಾನು ಹೇಳುವುದಕ್ಕಾಗುವುದಿಲ್ಲ. ಆದಷ್ಟು ಜಾಗ್ರತೆ ಅದನ್ನು ಹಾಕಿಸೋಣ.

ಉಪಾಧ್ಯಕ್ಷರು:– ಈಗ ಒಂದೊಂದು ಗ್ರೂಪ್ಸ್ ಮಾಡಿರುತ್ತೇವೆ. ಆ ಗ್ರೂಪ್‌ನಲ್ಲಿ ಮತ್ತೆ ಬಂದಾಗ ಆ ಪ್ರಶ್ನೆಯನ್ನು ಹಾಕುತ್ತೇವೆ. ಈಗ ಅಯೋಧ್ಯೆ ಘಟನೆ ನಂತರ ರಾಜ್ಯದಲ್ಲಿ ಇತ್ತೀಚೆಗೆ ಜರುಗಿದ ಕೋಮು ಗಲಭೆಗೆ ಸಂಬಂಧಿಸಿದಂತೆ....

ಶ್ರೀ ಬಿ.ಎಸ್. ಯಡಿಯೂರಪ್ಪ:– ಆ ಗ್ರೂಪ್‌ಗೆ ಬರುವುದಿಲ್ಲ. ನಾನು ತಮ್ಮ ಛೇಂಬರ್ಸ್‌ಗೆ ಬಂದಾಗ 64ಕ್ಕೆ ಕನ್‌ವರ್ಟ್ ಮಾಡಿದ್ದೇನೆ, ನೋಟೀಸ್ ಕಳಿಸಿ ಅದನ್ನು ಆಕ್ಸೆಪ್ಟ್ ಮಾಡಿಕೊಂಡಿದ್ದೇನೆ ಎಂದು ಹೇಳಿದಿರಿ. ಈಗ ಅದನ್ನು ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳುತ್ತಿದ್ದೀರಿ.

ಉಪಾಧ್ಯಕ್ಷರು:– ಈಗ ನಿನ್ನೆ ನಾನು ಹೇಳಿದ್ದು ಹೆಲ್ಡ್ ಓವರ್ ಕ್ವಶ್ಚನ್‌ಗೆ ಮಾಡಿದ್ದೇವೆ ಎಂದು. ನಿನ್ನೆ ನೀವು ಬಂದು ಮಾತನಾಡಿದ್ದುದು ನೆರೆಹಾವಳಿ ಬಗ್ಗೆ ಮಾತನಾಡುತ್ತೇನೆ ಎಂದು, ಇದರ ಬಗ್ಗೆ ಹೇಳಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಇದರ ಬಗ್ಗೆಯೇ ಹೇಳಿದ್ದುದು. ಮಾನ್ಯ ಯಡಿಯೂರಪ್ಪನವರ ಪ್ರಶ್ನೆ ಅಂದ ತಕ್ಷಣ ಅದಕ್ಕೆ ಅಡ್ಡ ದಾರಿ ಹಿಡಿಸುವಂತೆ ಇವರೇ ಪ್ರಯತ್ನ ಮಾಡುತ್ತಾರೇನೋ ಎಂದು, ನನಗೆ ಇದು ಅರ್ಥ ಆಗುವುದಿಲ್ಲ.

ಉಪಾಧ್ಯಕ್ಷರು:– ಇದರ ಬಗ್ಗೆ ಆದರೆ ಅದಲ್ಲ. ನಾನು ನೀವು ಇಬ್ಬರೂ ಕನ್‌ಫ್ಯೂಸ್ ಮಾಡಿಕೊಂಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಾಗಾದರೆ ಸರಿ, ನಾಳೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಉಪಾಧ್ಯಕ್ಷರು:– ನಾಳೆ ಎಂದು ಹೇಳುವುದಿಲ್ಲ. ಆ ಗ್ರೂಪ್‌ನಲ್ಲಿ ಬಂದಾಗ ಖಂಡಿತವಾಗಿ ತೆಗೆದುಕೊಳ್ಳೋಣ.

ಶ್ರೀ ಬಿ.ಎಂ. ಇದಿನಬ್ಬ:– ಇವತ್ತು ಕಾಲಿಂಗ್ ಅಟೆನ್‌ಷನ್ಸ್ ಇಲ್ಲವೇ ?

<u>ಅಯೋಧ್ಯೆಯ ಘಟನೆಗೆ ಸಂಭವಿಸಿದಂತೆ ಮುಖ್ಯಮಂತ್ರಿಯವರ ಹೇಳಿಕೆಯ ಮೇಲೆ ಚರ್ಚೆ</u>

ಉಪಾಧ್ಯಕ್ಷರು:– ಇವತ್ತು ಕಾಲಿಂಗ್ ಅಟೆನ್‌ಷನ್ಸ್ ಇಲ್ಲ, 334ರ ನಿಯಮದ ಮೇರೆಗೆ ಚರ್ಚೆಯೂ ಇಲ್ಲ.

''ಅಯೋಧ್ಯೆಯ ಘಟನೆಯ ನಂತರ ರಾಜ್ಯದಲ್ಲಿ ಇತ್ತೀಚೆಗೆ ಜರುಗಿದ ಕೋಮು ಗಲಭೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯ ಮಂತ್ರಿಯವರ ಹೇಳಿಕೆಯ ಮೇಲೆ ಮುಂದುವರಿದ ಚರ್ಚೆ''... ಶ್ರೀಯುತ ರಾಮಕೃಷ್ಣ ಹೆಗಡೆಯವರು...

ಶ್ರೀ ರಾಮಕೃಷ್ಣ ಹೆಗಡೆ (ಬಸವನಗುಡಿ):– ಮಾನ್ಯ ಅಧ್ಯಕ್ಷಿಣಿಯವರೆ, ಈ ನಿಲುವಳಿ ಸೂಚನೆಯನ್ನು ತಂದಾಗ ಮಾನ್ಯ ಮುಖ್ಯಮಂತ್ರಿಗಳ ಮತ್ತು ವಿರೋಧ ಪಕ್ಷದ ನಾಯಕರ ನಡುವೆ ಪ್ರಸ್ತಾವಿಕವಾದ ಚರ್ಚೆ ಆಯಿತು. ಆ ಸಂದರ್ಭದಲ್ಲಿ ನಾನು ಹೇಳಿದೆ, ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುವುದಕ್ಕಿಂತ ಮೊದಲು ವಿರೋಧಿ ಪಕ್ಷದ ನಾಯಕರು ಈ ನಿಲುವಳಿ